ಮೈಮೇಲಿರುವ ಹುಣ್ಣಿಗೂ, ಈ ಬೈಹುಲ್ಲ ಸರಕ್ಕೂ, ಶಾಸ್ತ್ರಿಗಳ ಮಂತ್ರಕ್ಕೂ ಏನು ಸಂಬಂಧ ಅಂದುಕೊಂಡ. ಆಯುರ್ವೇದವೇನೋ ಬಹಳ ದೊಡ್ಡ ವೈದ್ಯಪದ್ಧತಿಯೆಂದೂ, ಬಹಳ ಯಶಸ್ವಿ ಔಷಧಿಯೆಂದೂ ಅಪ್ಪನಿಂದ ಕೇಳಿದ್ದ. ಹಲವಾರು ಲೇಖನಗಳನ್ನು ಓದಿದ್ದ. ಆದರೆ ಬಲಿಗೆ ಸಿದ್ಧ ಮಾಡಿದ ಕುರಿಯ ತರಹ ಕುತ್ತಿಗೆ ಸುತ್ತ ಈ ತರಹ ಬೈಹುಲ್ಲ ಸರ ಹಾಕುತ್ತಾರೆ ಅಂದುಕೊಂಡಿರಲಿಲ್ಲ. ಇದೊಂದು ಮೂಢನಂಬಿಕೆಯ ತರಹ ಕಾಣುತ್ತಿತ್ತು. ಬೈಹುಲ್ಲ ಸರ ಅಲ್ಲಲ್ಲಿ ಸಂಜಯನ ಕೊರಳನ್ನೂ ಸ್ವಾಭಿಮಾನವನ್ನೂ ಚುಚ್ಚುತ್ತಿತ್ತು.

ಏನೇ ಆಗಲಿ, ಸೀತಾಪುರಕ್ಕೆ ಬಂದಾಗಿದೆ, ಶಾಸ್ತ್ರಿಗಳಲ್ಲಿ ಔಷಧ ಕೇಳಿಯಾಗಿದೆ ಇನ್ನು ಅವರು ಹೇಳಿದ ಹಾಗೆ ಮಾಡಿಯೇ ಬಿಡುತ್ತೇನೆ ಅಂದುಕೊಂಡ. ಶಾಸ್ತ್ರಿಗಳಿಗೆ ಎದುರು ಹೇಳುವ ಧೈರ್ಯವೂ ಅವನ ಹತ್ತಿರ ಇರಲಿಲ್ಲ. ಕೆಲವರ ಮುಖಚರ್ಯೆಯೇ ಹಾಗೆ ತಾನೇ?

ಆಶಾ ಸಂಜಯ್ ಹತ್ತಿರ ಬಂದು ಬೇರನ್ನು ಎಲ್ಲಿ ಹಾಗೂ ಹೇಗೆ ತೇದಬೇಕೆಂದು ತೋರಿಸಿಕೊಟ್ಟಳು. ಸಂಜಯನಿಗೆ ಕುತ್ತಿಗೆಯ ಸುತ್ತ ಹಾಕಿದ ಹುಲ್ಲ ಸರ ವಿಚಿತ್ರ ಕಾಣತೊಡಗಿತು. ಆದರೂ ತೋರಿಸಿಕೊಳ್ಳದೆ ಶಾಸ್ತ್ರಿಗಳು ಹೇಳಿದ ಹಾಗೆ ಬೇರುಗಳನ್ನು ತೇದಿ ಹಚ್ಚಿಕೊಂಡ.

ಸಂಜಯ್ ಅರೆ ಮನಸ್ಸಿಂದ ಆಶಾ ಹೇಳಿದ ಹಾಗೆ ಬೇರುಗಳನ್ನು ತೇದಿ ಹಚ್ಚಿಕೊಂಡ. ಬೇರುಗಳನ್ನೂ ನೀರನ್ನೂ ಜಾಗ್ರತೆಯಾಗಿ ಎತ್ತರದಲ್ಲಿ ಇಟ್ಟ. ಆ ಕೆಲಸಕ್ಕೆ ಆಶಾ ನೆರವಾದಳು.

ಸರ್ಪಸುತ್ತಿನ ಹುಣ್ಣುಗಳು ಸ್ವಲ್ಪ ಉರಿಯ ತೊಡಗಿದವು. ಆಶಾಳ ಎದುರು ತೋರಿಸಿಕೊಳ್ಳಲು ಆಗದೆ ತನ್ನಷ್ಟಕ್ಕೆ ಮುಖ ಸಿಂಡರಿಸಿದ.

'ಏನು, ಹುಣ್ಣು ಉರಿಯುತ್ತಿದೆಯಾ?' ಆಶಾ ಕೇಳಿದಳು.

'ಇಲ್ಲ, ಇನ್ನೂ ಜಾಸ್ತಿ ಉರಿಯುತ್ತದೆ ಅಂದುಕೊಂಡಿದ್ದೆ. ಅಷ್ಟೇನೂ ಇಲ್ಲ' ಅನ್ನುತ್ತಾ ಮುಗುಳ್ನಗಲು ಪ್ರಯತ್ನಪಟ್ಟ ಸಂಜಯ್.

ಎಂತಹ ವ್ಯಕ್ತಿಯಪ್ಪ ಈ ಸಂಜಯ್. ಗಾಯದಿಂದ ಉರಿದರೂ ಹೇಳಿಕೊಳ್ಳುವುದಿಲ್ಲ. ಇಂತಹ ಸಣ್ಣ ವಿಷಯಕ್ಕೂ ಮುಖವಾಡ ಹಾಕುವ ಅಗತ್ಯ ಏನಿದೆ? ಇವನೊಬ್ಬ ವಿಚಿತ್ರ ವ್ಯಕ್ತಿ ಅಂತ ಅಂದುಕೊಂಡಳು ಆಶಾ.

ಅದೇ ಹೊತ್ತಿಗೆ ಹತ್ತಿರದ ಹಟ್ಟಿಯಿಂದ ದನ 'ಅಂಬೇ' ಅಂತ ಕೂಗುವುದು ಕೇಳಿತು. ಶಾಸ್ತ್ರಿಗಳು 'ಸೀತಾ, ನೋಡು ಗೌರಿಗೆ ಹಸಿವಾಗ್ತಾ ಇದೆ. ಸಂಜಯನಿಗೂ ಹಸಿವಾಗಿರಬೇಕು. ಬೇಗ ಊಟ ಹಾಕು' ಅಂದರು.

ಸೀತಮ್ಮ 'ಆಶಾ, ಎಲೆ ಹಾಕಮ್ಮ, ನಿನ್ನಜ್ಜನಿಗೆ ಹಸಿವಾಗುತ್ತದೆ' ಅಂದರು. ಆಶಾ ನಡುವಿನ ಕೋಣೆಯಲ್ಲಿ ಎಲೆ ಹಾಕಲು ಶುರು ಮಾಡಿದಳು. ಎಲ್ಲರಿಗೆ ಎಲೆ ಹಾಕುತ್ತಾ ಆಮೇಲೆ ಒಂದು ಹೆಚ್ಚುವರಿ ಎಲೆಯನ್ನೂ ಪಂಕ್ತಿಬಿಟ್ಟು ಅಡ್ಡವಾಗಿ ಹಾಕಿದಳು. ಸೀತಮ್ಮ ಅನ್ನ ಪಲ್ಯ ಸಾಂಬಾರ್ ಎಲ್ಲವನ್ನೂ ಬಳಸಿಯಾದ ಮೇಲೆ ಆಶಾ ಅಡ್ಡ ಹಾಕಿದ ಎಲೆಯನ್ನು ತೆಗೆದುಕೊಂಡು ದನದ ಹಟ್ಟಿಯ ಕಡೆ ಹೋದಳು.

ಸಂಜಯ್ 'ಇದೇನು' ಅಂತ ಶಾಸ್ತ್ರಿಗಳಲ್ಲಿ ಕೇಳಿದ.

ಅದಕ್ಕೆ ಶಾಸ್ತ್ರಿಗಳು 'ನಮ್ಮಲ್ಲಿ ಗೌರಿ ಮನೆಯ ಸದಸ್ಯೆ ಇದ್ದ ಹಾಗೆ. ಅವಳಿಗೆ ಮಧ್ಯಾಹ್ನ ಊಟ ಕೊಡದೆ ನಾವು ಊಟ ಮಾಡುವುದಿಲ್ಲ. ಅವಳಿಗೆ ಹಸಿವಾದಾಗ ನಮಗೂ ಊಟ' ಎನ್ನುತ್ತಾ ಸಣ್ಣದಾಗಿ ನಕ್ಕರು.

ಸೀತಮ್ಮ ಮುಂದುವರಿಸಿ, 'ಗೌರಿ ನಮ್ಮ ಮನೆ ಹೊಕ್ಕಿದ ದನ. ಅವಳಿಗೂ ನನ್ನ ತರವೇ ಪ್ರಾಯ ಆಗಿದೆ. ಅವಳು ಹಾಲು ಕರೆಯುತ್ತಿದ್ದಾಗ ಮನೆಗೆ ನೆಂಟರು ಬಂದ್ರೆ ಗೌರಿಯ ಹತ್ರ ಹೋಗಿ ಯಾವಾಗ ಬೇಕಾದರೂ ಕೆಚ್ಚಲಿಗೆ ಕೈ ಹಾಕಿದರೆ ಹಾಲು ಕೊಡುವವಳು. ಈಗ ಹಟ್ಟಿಯಲ್ಲಿ ಯಾವ ದನಕ್ಕೂ ಏನಾದರೂ ತೊಂದರೆ ಆದರೆ ಗೌರಿ ನಮ್ಮನ್ನು ಕರೆಯಲು ಶುರುಮಾಡ್ತಾಳೆ. ಮಧ್ಯಾನ್ಹ ಗಂಟೆ ಹನ್ನೆರಡಾಗುವುದು ಗೌರಿಗೆ ಚೆನ್ನಾಗಿ ಗೊತ್ತು' ಎಂದರು.

ಸಂಜಯನಿಗೆ ಇದೆಲ್ಲ ತನ್ನ ಅಪ್ಪ ಹೇಳಿದ ಕಥೆಗಳ ಹಾಗೆ ಕಂಡಿತು. ಊಟ ಮಾಡಿದವನೇ ಆಶಾಳ ಜೊತೆಗೆ ಹಟ್ಟಿಗೆ ಹೋಗಿ ಗೌರಿಯನ್ನು ನೋಡಿ ಬಂದ.

'ಶಾಸ್ತ್ರಿಗಳೇ, ನಾನು ಎಷ್ಟು ದಿನ ಔಷಧ ಮಾಡಬೇಕು? ಈ ಬೇರನ್ನೂ ನೀರನ್ನೂ ತೆಗೆದುಕೊಂಡು ಹೋದರೆ ಸಾಕೇ? ಕುತ್ತಿಗೆಗೆ ಈ ಹಾರ ಎಷ್ಟು ದಿನ ಹಾಕಬೇಕು?' ಸಂಜಯ್ ಕೇಳಿದ.

ಶಾಸ್ತ್ರಿಗಳು 'ನೋಡಪ್ಪ, ನೀನು ಈಗಷ್ಟೇ ಬಂದಿದ್ದೀಯ, ಸ್ವಲ್ಪ ಆರಾಮ ಮಾಡು. ಅಷ್ಟೊಂದು ಅವಸರ ಯಾಕೆ? ನಾನು ಈಗ ಕೊಟ್ಟ ಔಷಧದಲ್ಲಿ ನಿನ್ನ ಕಾಯಿಲೆ ಇನ್ನೊಂದು ವಾರದಲ್ಲಿ ಸಂಪೂರ್ಣ ಗುಣವಾಗುತ್ತದೆ. ಆದರೂ ನಿನಗೆ ಇದು ತಿರುಗಿಬರದ ಹಾಗೆ ಆಗ್ಬೇಕಿದ್ರೆ ನೀನು ಸರ್ಪದೋಷ ನಿವಾರಣೆಗೆ ನಾಗನಿಗೆ ಪೂಜೆ ಮಾಡ್ಬೇಕು. ಇನ್ನೆರಡು ವಾರದಲ್ಲಿ ಪಂಚಮಿ ಬರುತ್ತದೆ. ಆ ದಿವಸ ಪೂಜೆ ಮಾಡಿದರೆ ಉತ್ತಮ' ಎಂದರು.

ಸಂಜಯ್ ಪೇಚಿಗೀಡಾದ. ಅವನು ಒಂದು ವಾರದ ರಜೆ ಹಾಕಿ ಬಂದಿದ್ದ.

'ಶಾಸ್ತ್ರಿಗಳೇ, ನನಗೆ ಒಂದು ವಾರದೊಳಗೆ ಅಮೇರಿಕಕ್ಕೆ ಹಿಂದೆ ಹೋಗಬೇಕಿತ್ತು' ಅಂದ.

'ಇಷ್ಟು ದೂರ ಬಂದಿದ್ದೀಯ.. ಇನ್ನೊಂದು ವಾರ ನಿಲ್ಲಲಿಕ್ಕೆ ಆಗುತ್ತೋ ನೋಡು. ನಮಗೆ ನೀನು ಅನಂತುವ ಮಗ.. ನೀನು ಒಂದು ವಾರವಲ್ಲ ಒಂದು ವರ್ಷ ನಿಂತರೂ ಬಹಳ ಸಂತೋಷ' ಅಂದರು ಶಾಸ್ತ್ರಿಗಳು.

ಸೀತಮ್ಮ ಅವರ ಧ್ವನಿಗೆ ಧ್ವನಿ ಕೂಡಿಸುತ್ತಾ 'ಅಲ್ಲ, ಮಗಃ ನಿನಗೆ ನಿನ್ನ ಮನೆ ನೋಡುವ ಮನಸಿಲ್ವ? ಇಲ್ಲೇ ಕೆಳಗೆ ಸ್ವಲ್ಪ ದೂರದಲ್ಲಿ ನಿನ್ನ ಮನೆ, ಆಸ್ತಿ, ಗದ್ದೆ, ಹೊಲ ಎಲ್ಲ ಇದೆ. ನಿನ್ನಜ್ಜ ಅಷ್ಟು ಪ್ರೀತಿಯಿಂದ ಮಾಡಿದ ಆಸ್ತಿಯದು. ನಿನ್ನಪ್ಪನಿಗೆ ಅದು ಬೇಕಾಗಿರಲಿಲ್ಲ. ಕೊನೆಯ ಪಕ್ಷ ನಿನಗೆ ಅದು ಹೇಗಿತ್ತು ಅಂತ ಹೋಗಿ ನೋಡಬಹುದಲ್ವ?' ಅಂದರು.

ಮಹಾಭಾರತದಲ್ಲಿ ಸಂಜಯನಿಗೆ ಇಡೀ ಕುರುಕ್ಷೇತ್ರ ಕಣ್ಣಲ್ಲಿ ನೋಡದೇ ಕಾಣುತ್ತಿತ್ತು. ನಮ್ಮ ಸಂಜಯನಿಗೆ ಸೀತಾಪುರ ಇಲ್ಲಿಗೆ ಬರದೇ ಅಪ್ಪನ ಕಥೆಗಳ ಮುಖಾಂತರ ಕಂಡಿತ್ತು. ಆದರೆ ಈಗ ಇದನ್ನು ಕಣ್ಣಾರೆ ಕಾಣುವ ಅವಕಾಶ. ಸಂಜಯನಿಗೆ ಇದು ಸರಿ ಅನಿಸಿತು.

'ನಾನು ಇಲ್ಲಿ ನಿಲ್ಲಬೇಕಾದ್ರೆ ಅಮೇರಿಕಾದ ನನ್ನ ಮ್ಯಾನೇಜರ್‌ಗೆ ತಿಳಿಸಬೇಕಲ್ವ? ನಾನು ಈವರೆಗೆ ಎಂದೂ ಒಂದುವಾರಕ್ಕಿಂತ ಹೆಚ್ಚು ರಜೆ ಹಾಕಿದ್ದಿಲ್ಲ. ನನ್ನ ಕೆಲಸ ಅಂತಹದ್ದು. ನಾನು ಹೆಚ್ಚು ಸಮಯ ಸೀತಾಪುರದಲ್ಲಿರಬೇಕಾದರೆ ಕಾರಣ ಹುಡುಕಬೇಕಾಗುತ್ತದೆ' ಅಂದ.

'ಅಯ್ಯೋ, ಏನು ನಿನ್ನ ಮ್ಯಾನೇಜರ್ ಮನುಷ್ಯ ಅಲ್ವ? ಊರಿಗೆ ಹೋಗಿದ್ದೆ, ಒಂದೆರಡು ದಿನ ನಿಂತೆ ಅಂತ ಹೇಳಿದರಾಯಿತು' ಅಂದರು ಸೀತಮ್ಮ.

ಸಂಜಯ್ 'ಅದು ಅಷ್ಟೆಲ್ಲಾ ಸುಲಭ ಇಲ್ಲ ಅಮ್ಮ ..' ಅಂದ. ಇವನೇನೋ ದೊಡ್ಡ ಮನುಷ್ಯ ಇಡೀ ಪ್ರಪಂಚವೇ ತನ್ನ ತಲೆಯಲ್ಲಿ ಹೊತ್ತುಕೊಂಡು ತಿರುಗುವ ಹಾಗೆ ಮಾಡುತ್ತಾನೆ ಅಂದುಕೊಂಡಳು ಆಶಾ.

ಸಂಜಯ್ ಆಮೇಲೆ ಆಲೋಚನೆ ಮಾಡಿ 'ನನಗೆ ಸ್ವಲ್ಪ ಫೋನ್ ಮಾಡಬೇಕಾಗಿದೆ. ಹಾಗೇ ಇಮೇಲ್ ಕೂಡ ಕಳಿಸಬೇಕಾಗಿದೆ. ಇಲ್ಲಿ ನೆಟ್ವರ್ಕ್ ಇಲ್ಲ. ನಾನು ಸವಣೂರಿನಿಂದ ಬರುವಾಗ ದೊಡ್ಡ ಗುಡ್ಡದ ಮೇಲಿನ ಕಲ್ಲಿನ ಮೇಲೆ ಇಂಟರ್ನೆಟ್ ಸಿಕ್ಕಿತ್ತು. ಅಲ್ಲಿಗೆ ಹೋಗುವ ಅಂದ್ರೆ ನನಗೆ ಹುಲಿಯ ಭಯ' ಅಂದ.

ಆಶಾ ನಗುತ್ತಾ 'ಹುಲಿಯೇನೂ ನಿಮ್ಮನ್ನು ತಿನ್ನುವುದಿಲ್ಲ. ಅದಕ್ಕೆ ನಿಮಗಿಂತ ರುಚಿಯ ಬೇರೆ ವಸ್ತು ಕಾಡಿನಲ್ಲಿದೆ' ಅಂದಳು.

ಸೀತಮ್ಮ 'ಏನೇ, ಇದೆಂಥ ತಮಾಷೆ? ಅವನಿಗೆ ನಮ್ಮೂರ ಕಾಡು ಗೊತ್ತಿದೆಯಾ?' ಎಂದರು.

ಶಾಸ್ತ್ರಿಗಳು 'ಅದೇನು ದೊಡ್ಡ ವಿಷಯ. ನಮ್ಮ ಮಾದನನ್ನು ಇವನ ಜೊತೆಗೆ ಕಳಿಸಿದರಾಯ್ತು' ಹೇಳುತ್ತಾ 'ಮಾದಾ, ಇಲ್ಲಿ ಒಮ್ಮೆ ಬರ್ತೀಯಾ?' ಎಂದರು.

ಮಾದ ಶಾಸ್ತ್ರಿಗಳ ಮನೆಯ ಕೆಲಸದವನು. ಶಾಸ್ತ್ರಿಗಳ ಅಸಿಸ್ಟಂಟ್ ಅಂತ ಹೇಳಲೂ ಬಹುದು. ಹುಟ್ಟಿನಿಂದ ಕೆಳವರ್ಗದವನು, ಆದರೂ ಶಾಸ್ತ್ರಿಗಳ ಮನೆಯಲ್ಲಿ ಅವನು ಮಗನ ತರವೇ. ಎಲ್ಲರೂ ಮಾದನನ್ನು ಶಾಸ್ತ್ರಿಗಳ ನೆರಳು ಅಂತ ಹೇಳ್ತಾರೆ. ಮಾದ ಶಾಸ್ತ್ರಿಗಳ ಜೊತೆಗೆ ಕಾಡಿಗೆ ಯಾವಾಗಲೂ ಹೋಗುವವನು.. ಶಾಸ್ತ್ರಿಗಳಿಗೆ ಗೊತ್ತಿರುವ ಎಲ್ಲಾ ಮದ್ದಿನ ಗಿಡಗಳು ಮರಗಳು ಮಾದನಿಗೂ ಗೊತ್ತು. ಶಾಸ್ತ್ರಿಗಳು ಹೋಗದಿದ್ದರೆ ಮಾದನೇ ಕಾಡಿಗೆ ಹೋಗಿ ಬೇರು ತೊಗಟೆಗಳನ್ನು ತರುವವನು. ಶಾಸ್ತ್ರಿಗಳ ಎಲ್ಲ ಕಷಾಯ ಎಣ್ಣೆ ಇತ್ಯಾದಿಯನ್ನು ತಯಾರಿಸುವವನು ಮಾದನೇ.

'ಏನು ಸ್ವಾಮಿ ಕರಿದ್ರಾ?' ಎನ್ನುತ್ತಾ ಮಾದ ಬಂದ. ಆತ ಹೆಗಲಮೇಲೊಂದು ಸಣ್ಣ ಬಟ್ಟೆ ಮತ್ತು ಸೊಂಟದಲ್ಲೊಂದು ಬೈರಾಸು ಸುತ್ತಿಕೊಂಡಿದ್ದ.

(ಸಶೇಷ)